Spl. C 35/2025
PW: 03
CW: 03

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SPECIAL CASE : 35/2025

**ಫ್ರಾ.ಸಾ. 03**

**ದೋ.ಸಾ. 03**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಕಾಶ್ |
| ತಂದೆಯ ಹೆಸರು | : | ನರಸಿಂಹಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ | : | ಗೆರೆಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು |

**ದಿನಾಂಕ 16.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ಚಾಸಾ–2 ಮತ್ತು ಚಾಸಾ–3 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ವಿ.ಸಿ ಟಿವಿಯಲ್ಲಿ ಕಾಣುವ 2 ಮತ್ತು 3 ನೇ ಆರೋಪಿಗಳು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಈಗಾಗಲೇ ಮೂಲ ಪ್ರಕರಣದಲ್ಲಿ ನಿಶಾನಿಸಲಾಗಿರುವ ನಿಪಿ–1 ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ–1(ಸಿ) ಎಂದು ಈಗಾಗಲೇ ಗುರತಿಸಲಾಗಿದೆ. ಸುಮಾರು 6 ವರ್ಷಗಳ ಹಿಂದೆ ಪೊಲೀಸರು ನಮ್ಮ ಊರಿಗೆ ಬೀಟಿಗೆ ಬಂದಾಗ ಸದರಿ ಸಹಿಯನ್ನು ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತು ಹಾಗೂ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ. ನಿಪಿ–1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ–1 ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು**

**ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2). ದಿನಾಂಕ 12.08.2019 ರಂದು ಮಧ್ಯಾಹ್ನ ಸುಮಾರು 2.40 ಗಂಟೆಗೆ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಮಾರಸನಹಳ್ಳಿಗೆ ಹೋಗುವಾಗ ಫ್ರಾಸಾ–1 ನನ್ನನ್ನು ಪಂಚರಾಗಿ ಬರಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಫ್ರಾಸಾ–1 ರವರ ಬಳಿ ಹೋದಾಗ ಫ್ರಾಸಾ–1 ರವರು ದಾಖಲೆ ಇಲ್ಲದಿದ್ದ ಆಟೋವಿನಲ್ಲಿದ್ದ ಬಬ್ಬ ವ್ಯಕ್ತಿ ಹಾಗೂ ಒಬ್ಬ ಮಹಿಳೆ ಆಟೋದಿಂದ ಕೆಳಗೆ ಇಳಿದು, ಓಡಲು ಪ್ರಾರಂಭಿಸಿದ್ದು, ದ್ವಿಚಕ್ರ ವಾಹನದಲ್ಲಿದ್ದ ಆರೋಪಿ ದ್ವಿಚಕ್ರ ವಾಹನವನ್ನು ಬಿಟ್ಟು ಓಡಲು ಪ್ರಾರಂಭಿಸಿದ್ದು, ಫ್ರಾಸಾ–1 ರವರ ಆದೇಶದ ಮೇರೆಗೆ ಅವರ ಸಿಬ್ಬಂದಿಗಳು ಸದರಿ ಆರೋಪಿಗಳನ್ನು ಹಿಡಿದು, ಅವರ ಮುಂದೆ ಹಾಜರುಪಡಿಸಿದ್ದು ಹಾಗೂ ಆಟೋವಿನಲ್ಲಿದ್ದ ಮೂರು ಬ್ಯಾಗುಗಳನ್ನು ಹಾಗೂ ಆರೋಪಿಗಳನ್ನು ಅಂಗಶೋಧನೆ ಮಾಡಬೇಕು ಎಂದು ನನ್ನನ್ನು ಪಂಚರಾಗಿ ಸಹಕರಿಸುವಂತೆ ಕೇಳಿದ್ದಕ್ಕೆ ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಾಗೆಯೇ ಚಿಕ್ಕಬಳ್ಳಾಪುರ ತಾಲ್ಲೂಕು, ಗೇರಹಳ್ಳಿ ವಾಸಿ ಪ್ರಕಾಶ್ ಹಾಗೂ ಟಿಪ್ಪು ಬಿನ್ ಮಹಮ್ಮದ್ ಹುಸೇನ್ ರವರನ್ನು ಕೂಡ ಪಂಚರಾಗಿ ಬರಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಫ್ರಾಸಾ–1 ರವರು ಸದರಿ ಮೇಲ್ಕಂಡ ಆರೋಪಿರಗಳ ಹೆಸರು ಮತ್ತು ವಿಳಾಳವನ್ನು ಕೇಳಲಾಗಿ, 1 ನೇ ಆರೋಪಿ ತನ್ನ ಹೆಸರು ನಾರಾಯಣಸ್ವಾಮಿ ಬಿನ್ ನಾಗಪ್ಪ, 2 ನೇ ಆರೋಪಿ ಪಿಂಡಿ ಅಪ್ಪಣ್ಣ ಬಿನ್ ಸಿಂಹಾಚಲಂ, ಮತ್ತೊಂದು ಆಸಾಮಿ 3 ನೇ ಆರೋಪಿ ಶ್ರೀಮತಿ ತುರೇರಾಮ್ ಹಾಗೂ ಮತ್ತೊಬ್ಬ 4 ನೇ ಆರೋಪಿ ಆಂಜನೇಯ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೇಲ್ಕಂಡ 4 ಆರೋಪಿಗಳನ್ನು ಅಂಗಶೋಧನೆ ಮಾಡಬೇಕಾಗಿರುತ್ತದೆ ಎಂದು ಕೇಳಲಾಗಿ ಫ್ರಾಸಾ–1 ರವರು ತಮ್ಮ

ಗುರುತಿನ ಚೀಟಿಯನ್ನು ತೋರಿಸಿ ನಾರಾಯಣಸ್ವಾಮಿ, ಪಿಂಡಿ ಅಪ್ಪಣ್ಣ ಹಾಗೂ ಆಂಜನೇಯರವರಿಗೆ ತಾನೇ ಅಂಗಶೋಧನೆ ಮಾಡಬಹುದೇ ಅಥವಾ ಯಾವುದಾದರೂ ಗೆಜೆಟೆಡ್ ಅಧಿಕಾರಿಯವರ ಮುಂದೆ ಹಾಜರುಪಡಿಸಿ ಅಂಗಶೋಧನೆ ಮಾಡಿಸಬೇಕೆ ಎಂದು ಕೇಳಲಾಗಿ ಅದಕ್ಕೆ ಮೇಲ್ಕಂಡ 3 ಜನ ಆರೋಪಿಗಳು ಫ್ರಾಸಾ-1 ರವರೇ ಅಂಗಶೋಧನೆ ಮಾಡಬಹುದು ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೇಲ್ಕಂಡ 3 ಜನ ಆರೋಪಿಗಳನ್ನು ಅಂಗಶೋಧನೆ ಮಾಡಲಾಗಿ, 1 ನೇ ಆರೋಪಿ ನಾರಾಯಣಸ್ವಾಮಿರವರ ಬಳಿ ನಗದು ಹಣ ರೂ.1000/- ಹಾಗೂ ಒಂದು ಮೊಬೈಲ್ ಫೋನ್ ಹಾಗೂ ಆತನ ಬಳಿ ದ್ವಿಚಕ್ರ ವಾಹನ ಸಂಖ್ಯೆಃಎಪಿ-39-ಎಕೆ-9992 ನಂಬರಿನ ಟಿವಿಎಸ್ ಎಕ್ಸೆಲ್ ಸಿಕ್ಕಿರುತ್ತದೆ, 2 ನೇ ಆರೋಪಿ ಪಿಂಡಿ ಅಪ್ಪಣನ ಅಂಗಶೋಧನೆ ಮಾಡಲಾಗಿ ಅವರ ಬಳಿ ರೂ.1000/- ನಗದು ಹಣ, ಒಂದು ಮೊಬೈಲ್ ಫೋನ್ ಸಿಕ್ಕಿರುತ್ತದೆ. 4 ನೇ ಆರೋಪಿ ಆಂಜನೇಯರವರ ಅಂಗಶೋಧನೆ ಮಾಡಲಾಗಿ, ರೂ.200/- ನಗದು ಹಣ ಹಾಗೂ ಮೊಬೈಲ್ ಫೋನ್ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. 3 ನೇ ಆರೋಪಿ ತುರೇರಾಮ್ ರವರನ್ನು ಫ್ರಾಸಾ-1 ರವರು ತಮ್ಮ ಸಿಬ್ಬಂದಿ ಪುಷ್ಪಲತಾರವರ ಮುಖಾಂತರ ಅಂಗಶೋಧನೆ ಮಾಡಬಹುದೇ ಎಂದು ಕೇಳಲಾಗಿ, ಅದಕ್ಕೆ ಸದರಿ ಆರೋಪಿರವರು ಒಪ್ಪಿದ್ದು, ಅವರ ಅಂಗಶೋಧನೆಯನ್ನು ಮಾಡಿದಾಗ ಅವರ ಬಳಿ ಒಂದು ಮೊಬೈಲ್ ಫೋನ್ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. ನಂತರ ಸದರಿ ಆರೋಪಿಗಳಿಗೆ ಮಾದಕ ವಸ್ತು ಗಾಂಜಾ ಸೊಪ್ಪಿನ ಸಾಗಾಟಣೆಯ ಬಗ್ಗೆ ವಿಚಾರಣೆ ಮಾಡಲಾಗಿ, ಸದರಿಯವರು ಗಾಂಜಾ ಸೊಪ್ಪನ್ನು ಮಾರಾಟ ಮಾಡಲು ಪ್ಲಾಸ್ಟಿಕ್ ಕವರ್ ನಲ್ಲಿಟ್ಟು ಪ್ಯಾಕ್ ಮಾಡಿ ಬ್ಯಾಗ್ ನಲ್ಲಿ ಇಟ್ಟುಕೊಂಡು ಆಟೋದಲ್ಲಿ ಬಂದಿರುವುದಾಗಿ ತಿಳಿಸಿದ್ದು, ಸದರಿ ಮಾಲುಗಳನ್ನು ಆಂಧ್ರಪ್ರದೇಶದ ವಿಶಾಖಪಟ್ಟಣಂ ಕೆ.ಡಿ.ಪೇಟೆಯ ಒಬ್ಬ ವ್ಯಕ್ತಿಯಿಂದ ಒಂದು ಕೆಜಿ ಸೊಪ್ಪಿಗೆ ರೂ.5000/-ರಂತೆ

ಕೊಂಡು, ಬೆಂಗಳೂರಿನ ಒಬ್ಬ ವ್ಯಕ್ತಿಗೆ ಒಂದು ಕೆಜಿ ಸೊಪ್ಪನ್ನು ರೂ.10,000/–ಗಳಿಗೆ ಮಾರಾಟ ಮಾಡಲು ಹೋಗುತ್ತಿರುವುದಾಗಿ ಗಾಂಜಾ ಸೊಪ್ಪನ್ನು ತಮಗೆ ಮಾರಾಟ ಮಾಡಿದ್ದು ಮತ್ತು ಕೊಂಡುಕೊಳ್ಳುವ ವ್ಯಕ್ತಿಯ ಹೆಸರು ವಿಳಾಸ ಗೊತ್ತಿಲ್ಲ ಹಾಗೂ ಗಾಂಜಾ ಸೊಪ್ಪನ್ನು ಕೊಂಡುಕೊಳ್ಳುವ ವ್ಯಕ್ತಿಯ ಫೋನ್ ನಂಬರ್ ಒಂದು ಚೀಟಿಯಲ್ಲಿ ಬರೆದುಕೊಂಡಿದ್ದು, ಅದು ಕಳೆದುಹೋಗಿರುತ್ತದೆ ಎಂದು 1ನೇ ಆರೋಪಿ ನಾರಾಯಣಸ್ವಾಮಿ ಹೇಳಿರುತ್ತಾನೆ ಎಂದರೆ ಸರಿಯಲ್ಲ.

3). ನಂತರ ಆಟೋವನ್ನು ಪರಿಶೀಲಿಸಲಾಗಿ ಅದು ಎಪಿ–02–ಟಿಜಿ–0051 ನೋಂದಣಿಯ ಹಳದಿ ಬಣ್ಣದ್ದಾಗಿದ್ದು, ಆಟೋವಿನಲ್ಲಿ ಒಂದು ನೇರಳೆ ಬಣ್ಣದ ಲಗ್ಗೇಜ್ ಬ್ಯಾಗ್, ಬಿಳಿ ಬಣ್ಣದ ಲೆದರ್ ಬ್ಯಾಗ್ ಹಾಗೂ ಕಪ್ಪು ಬಣ್ಣದ ಕಾಲೇಜ್ ಬ್ಯಾಗ್ ಗಳಿದ್ದು, ಅವುಗಳಲ್ಲಿ ಗಾಂಜಾ ಸೊಪ್ಪಿನ ಬಂಡಲ್ ಗಳು ಇರುವುದಾಗಿ 4 ಜನ ಆರೋಪಿಗಳು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅವುಗಳನ್ನು ಚಿಕ್ಕಬಳ್ಳಾಪುರದ ಟಿಪ್ಪುರವರಿಂದ ತೂಕ ಮಾಡಿಸಲಾಗಿ, ನೇರಳೆ ಬಣ್ಣದ ಲಗೇಜ್ ಬ್ಯಾಗಿನಲ್ಲಿ 1ನೇ ಪ್ಯಾಕೇಟ್ 2 ಕೆಜಿ 75 ಗ್ರಾಮ್ ತೂಕವಿದ್ದು, 2ನೇ ಪ್ಯಾಕೇಟ್ 1 ಕೆಜಿ 900 ಗ್ರಾಮ್ ತೂಕವಿದ್ದು, 3ನೇ ಪ್ಯಾಕೇಟ್ 1 ಕೆಜಿ 850 ಗ್ರಾಮ್ ತೂಕವಿದ್ದು ಹಾಗೂ 4ನೇ ಪ್ಯಾಕೇಟ್ 2 ಕೆಜಿ 50 ಗ್ರಾಮ್ ತೂಕದ ಗಾಂಜಾ ಸೊಪ್ಪು ಇರುತ್ತದೆ ಎಂದರೆ ಸರಿಯಲ್ಲ.

4). ನಂತರ ಬಿಳಿ ಬಣ್ಣದ ಲೆದರ್ ಬ್ಯಾಗನ್ನು ತೆಗೆದು ತೂಕದ ಯಂತ್ರದಿಂದ ತೂಕ ಮಾಡಲಾಗಿ 1ನೇ ಪ್ಯಾಕೇಟ್ 1 ಕೆಜಿ 950 ಗ್ರಾಮ್ ತೂಕ ಇರುತ್ತದೆ. 2ನೇ ಪ್ಯಾಕೇಟನ್ನು ತೆರೆದು ನೋಡಲಾಗಿ, ಅದರಲ್ಲಿ ಕೂಡ ಗಾಂಜಾ ಸೊಪ್ಪನ್ನು ತುಂಬಿದ್ದು ಕಂಡುಬಂದಿದ್ದು, ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಸುಮಾರು 1 ಕೆಜಿ 900 ಗ್ರಾಮ್ ತೂಕ ಇರುತ್ತದೆ. ನಂತರ 3ನೇ ಪ್ಯಾಕೇಟನ್ನು ತೆರೆದು ನೋಡಲಾಗಿ, ಅದರಲ್ಲಿ ಕೂಡ ಗಾಂಜಾ ಸೊಪ್ಪನ್ನು ತುಂಬಿದ್ದು ಕಂಡುಬಂದಿದ್ದು,

ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಸುಮಾರು 1 ಕೆಜಿ 950 ಗ್ರಾಮ್ ತೂಕ ಇರುತ್ತದೆ ಎಂದರೆ ಸರಿಯಲ್ಲ. ನಂತರ ಕಪ್ಪು ಬಣ್ಣದ ಕಾಲೇಜ್ ಬ್ಯಾಗನ್ನು ತೆರೆದು ನೋಡಲಾಗಿ, ಅದರಲ್ಲಿ ಎರಡು ಪ್ಯಾಕೇಟುಗಳಿದ್ದು, ಅವುಗಳಲ್ಲಿ 1 ನೇ ಪ್ಯಾಕೇಟನ್ನು ತೆರೆದು ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು ಸುಮಾರು 2 ಕೆಜಿ ತೂಕ ಇರುತ್ತದೆ. ಮತ್ತೊಂದು ಪ್ಯಾಕೇಟನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು ಸುಮಾರು 2 ಕೆಜಿ 50 ಗ್ರಾಮ್ ತೂಕ ಇರುತ್ತದೆ ಎಂದರೆ ಸರಿಯಲ್ಲ. ಮೇಲ್ಕಂಡ ಬಂಡಲ್ ಗಳಲ್ಲಿ ಪರೀಕ್ಷೆಗಾಗಿ ಎಫ್.ಎಸ್.ಎಲ್ ಗೆ ಕಳುಹಿಸುವ ಸಲುವಾಗಿ ಸುಮಾರು 50 ರಿಂದ 75 ಗ್ರಾಮ್ ನಷ್ಟು ಗಾಂಜಾವನ್ನು ಮಾದರಿಗಾಗಿ ತೆಗೆದು 9 ಬಿಳಿ ಬಣ್ಣದ ಚೀಲಗಳಲ್ಲಿಟ್ಟು ಮೂತಿಯನ್ನು ದಾರದಿಂದ ಕಟ್ಟಿ "M" ಎಂಬ ಅಕ್ಷರದಿಂದ ಅರಗಿನಿಂದ ಸೀಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಆರೋಪಿಗಳ ಅಂಗಶೋಧನೆ ಸಮಯದಲ್ಲಿ ವಶಪಡಿಸಿಕೊಂಡ ಮೊಬೈಲ್, ನಗದು ಹಣ ಹಾಗೂ ದ್ವಿಚಕ್ರ ವಾಹನವನ್ನು ಫ್ರಾಸಾ-1 ರವರು ವಶಕ್ಕೆಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೂರು ಬ್ಯಾಗಿನಲ್ಲಿ ಒಟ್ಟಾರೆಯಾಗಿ ಎಲ್ಲಾ ವಸ್ತುವನ್ನು ಫ್ರಾಸಾ-1 ರವರು ನನ್ನ ಹಾಗೂ ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ನಿಪಿ-1 ರಂತೆ ಆರೋಪಿಗಳಿಂದ ವಶಕ್ಕೆಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ವಿವರವಾದ ಹೇಳಿಕೆಯನ್ನು ಈಗಾಗಲೇ ಮೂಲ ಪ್ರಕರಣದಲ್ಲಿ ನಿಪಿ-5 ರಂತೆ ನಿಶಾನಿಸಲಾಗಿರುವ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ಮತ್ತು 3 ನೇ ಆರೋಪಿಗಳ ಪರ ಶ್ರೀ ಎನ್.ಆರ್ ಮತ್ತು ಶ್ರೀ ಎನ್ ಆರ್. ವಕೀಲರಿಂದಃ ಇಲ್ಲ.**

Spl. C 35/2025
PW: 03
CW: 03

**ಈ ದಿನ  ಈ ಪ್ರಕರಣವನ್ನು ಮೂಲ ಪ್ರಕರಣ** Spl C No. 240/2019 **ರೊಂದಿಗೆ** club **ಮಾಡಿರುವುದರಿಂದ ದಾಖಲಾತಿಗಳನ್ನು ಪ್ರತ್ಯೇಕವಾಗಿ ನಮೂದಿಸಿರುವುದಿಲ್ಲ.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ.ಪಿ. ರಾಮಲಿಂಗೇ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.